
# ಜೀವನದ ಬೆಲೆ



ಕಲೆ : ಪುರುಷೋತ್ತಮ ಕಾರಂತ

ಮಹಮ್ಮದ್ ಸಾಹೇಬರು ವೇಗದಿಂದ ಓಡುತ್ತಿದ್ದರು. ಅವರ ಜೊತೆ ಅವರ ಗೆಳೆಯನೂ ಓಡುತ್ತಿದ್ದ. ಸೈನಿಕರು ಅವರನ್ನು ಬೆನ್ನಟ್ಟಿ ಬರುತ್ತಿದ್ದರು. ಅವರಿಗೆ ಓಡಿ ಓಡಿ ಸುಸ್ತಾಗಿತ್ತು. ಹೇಗಾದರೂ ಮಾಡಿ ಸೈನಿಕರಿಂದ ತಪ್ಪಿಸಿಕೊಳ್ಳಲು ಅವರು ಉಪಾಯವನ್ನು ಹುಡುಕುತ್ತಿದ್ದರು.

ಅವರಿಗೆ ದಾರಿಯಲ್ಲಿ ಒಂದು ಕಣಿವೆ ಕಾಣಿಸಿತು. ಅಲ್ಲಿ ಅಡಗಿಕೊಳ್ಳುವುದೆಂದು ಹೋದರು. ಅಲ್ಲಿ ದಟ್ಟವಾಗಿ ಜೇಡರ ಬಲೆ ಹರಡಿತ್ತು. ಗೆಳೆಯ ಅದನ್ನು ಹರಿಯುವೆನೆಂದ.

ಮಹಮ್ಮದ್ ಹೇಳಿದರು : "ಅದು ಸರಿಯಲ್ಲ. ಆ ಬಲೆಯ ಹಿಂದೆ ಎಷ್ಟೊಂದು ಶ್ರಮವಿದೆ! ಅಷ್ಟೊಂದು ಕಷ್ಟಪಟ್ಟು ಹಣೆದ ಬಲೆಯನ್ನು ಸುಮ್ಮನೆ ಹರಿದು ಹಾಕುವುದು ಸರಿಯಲ್ಲ. ನಮ್ಮ ಪ್ರಾಣವನ್ನು ಉಳಿಸಿಕೊಳ್ಳಲು ಇತರರ ಜೀವಕ್ಕೆ ಹಾನಿ ಮಾಡುವುದು ತರವಲ್ಲ."

ಇಬ್ಬರೂ ಬಲೆಯನ್ನು ಸ್ವಲ್ಪವೂ ಹರಿಯದೆ, ಅದರ ಹಿಂದೆ ಹೋಗಿ ಕಣಿವೆಯಲ್ಲಿ ಅವಿತುಕೊಂಡರು.

ಸೈನಿಕರು ಆ ಕಡೆ ಧಾವಿಸಿ ಬಂದರು. ಅತ್ತ ಇತ್ತ ಇವರಿಗಾಗಿ ನೋಡಿದರು. ಜೇಡರ ಬಲೆಯನ್ನು ನೋಡಿ ಅವರು ಅಂದುಕೊಂಡರು, "ಬಲೆ ಹಾಗೆಯೇ ಇದೆ, ಹರಿದಿಲ್ಲ. ಆದ್ದರಿಂದ ಈ ಕಡೆ ಯಾರೂ ಬಂದಿರಲಿಕ್ಕಿಲ್ಲ" ಎಂದು. ಮತ್ತೆ ಅವರು ಬೇರೆ ದಿಕ್ಕಿನಲ್ಲಿ ಹೊರಟುಹೋದರು.

**ಇತರರ ಜೀವನವನ್ನು ಗೌರವಿಸುವುದು ಬಹಳ ಮುಖ್ಯ.**